ದಿನಾಂಕಃ 04.04.2017 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋದಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ನಂ.1 ಮತ್ತು 2 ರವರ ಪರಃ ಶ್ರೀ ಎಸ್‌ಕೆಪಿ ವಕೀಲರಿಂದ

ನನಗೆ ಮಲ್ಲಿಕಾರ್ಜುನಯ್ಯ ಮತ್ತು ಮಲ್ಲಿನಾಥ ಅಂತಾ ಎರಡೂ ಹೆಸರಿನಿಂದ ಕರೆಯುತ್ತಾರೆ. ಸೋಲಾಪೂರದ ಮಜರೆವಾಡಿ ಏರಿಯಾದಲ್ಲಿ ನನ್ನ ಹೆಂಡತಿ ಹೆಸರಿನಲ್ಲಿ ನಾನು ನಿವೇಶನಗಳ್ನು ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿವೇಶನಗಳ್ನು ದಾವಾ ಆಸ್ತಿಗಳಿಂದ ಬಂದ ಉತ್ಪನ್ನದ ಹಣದಿಂದ ಖರೀದಿಸಿದ್ದೇನೆಂದರೆ ಸರಿಯಲ್ಲ.

ನಾನು ಭಾರತ ಪೇಂಟ ಕಂಪನಿಯಲ್ಲಿ ಕ್ಯಾಶಿಯರ್ ಅಂತಾ ಕೆಲಸ ಮಾಡುತ್ತಿದ್ದೇನೆ. ನನಗೆ ಪ್ರತಿ ತಿಂಗಳು ರೂ.7600 ಸಂಬಳವಿರುತ್ತದೆ. ನಮ್ಮ ಮನೆಯ ಪ್ರತಿ ತಿಂಗಳ ಖರ್ಚಿಗೆ 10-12 ಸಾವಿರ ಬರುತ್ತದೆ. ಪ್ರತಿ ವರ್ಷ ದಾವಾ ಆಸ್ತಿಗಳ ಉತ್ಪನ್ನದಿಂದ ನನಗೆ 1 ಲಕ್ಷ ರೂಪಾಯಿ ಆದಾಯ ಬರುತ್ತದೆ. ಅದರಲ್ಲಿ ಅರ್ಧ ಭಾಗದ ಹಣ ಖರ್ಚು ಹಾಗೂ ಹೊಲ ಉಳುಮೆ ಮಾಡಿದ ರೈತರಿಗೆ ಕೊಡುತ್ತೇನೆ. ಈ ಬಗ್ಗೆ ಯಾವುದೇ ಕಾಗದ ಪತ್ರಗಳು ನನ್ನ ಬಳಿ ಇರುವದಿಲ್ಲ.

1991 ರಲ್ಲಿ ನಾನು ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುತ್ತಿದ್ದೆ ಆಗ ನನಗೆ ಪ್ರತಿ ತಿಂಗಳು ರೂ.17,000 ರಷ್ಟು ಸಂಬಳ ಬರುತ್ತಿತ್ತು, ಈ ಬಗ್ಗೆ ನಾನು ಕಾಗದಪತ್ರಗಳನ್ನು ಹಾಜರುರುಪಡಿಸಿಲ್ಲ.

ಮಜರೆವಾಡಿ ವ್ಯಾಪ್ತಿಯಲ್ಲಿ ಬರುವ ಪ್ಲಾಟ ನಂ.229 ಇದು ನನ್ನ ಹೆಂಡತಿಯ ಸ್ತ್ರೀ ಧನ ಆಸ್ತಿಯಾಗಿರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಿಡಿ-8 ನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಅದನ್ನು ನನ್ನ ಮಗನ ಹೆಸರಿನಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-8 ರಲ್ಲಿ ನನ್ನ ಮಗನಾದ ಬಸವರಾಜನ ಹೆಸರನ್ನು 1998 ರಲ್ಲಿಯೋ ಸೇರಿಸಿರುತ್ತೇನೆ. ದಾವಾ ಆಸ್ತಿಗಳ ಪೈಕಿ ಸರ್ವೆ ನಂ.52ಃಎ ಮತ್ತು ಮನೆ ನಂ.15ಃ1 ಇವುಗಳನ್ನು ನನ್ನ ತಂದೆಯೇ ಸಂಪಾದಿಸಿರುತ್ತಾನೆಂದರೆ ಸರಿ. ಸದರಿ ಆಸ್ತಿಗಳು ಮಾತ್ರ ಏಕತ್ರದಲ್ಲಿ ಇರುತ್ತವೆ ಎಂದರೆ ಸರಿಯಲ್ಲ.

ಸರ್ವೆ ನಂ.52ಃಎ ಇದು ಮಲ್ಲಿಕಾರ್ಜುನ ದೇವರ ಗುಡಿಯ ಇನಾಮಿ ಜಮೀನು ಎಂದರೆ ಸರಿ. ಅದನ್ನು ನಾನು ನನ್ನ ಹೆಸರಿನಲ್ಲಿ ವರ್ಗಾಯಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆಯವರು 1993 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ಕ್ಯಾನ್ಸರ ಆಗಿ ತೀರಿಕೊಂಡಿರುತ್ತಾರೆ. ನಮ್ಮ ತಂದೆಯು ಮರಣ ಹೊಂದುವ ಪೂರ್ವದಲ್ಲಿ 6-8 ತಿಂಗಳು ಹಾಸಿಗೆ ಹಿಡಿದಿದ್ದರು. ನಾನು ವಾದಿಗೆ ಪಾಲುವಾಟ್ನಿ ದಾವೆ ಹಾಕಲು ಪ್ರಚೋದನೆ ನೀಡಿ ಅವಳ ಮುಖಾಂತರ ಆಸ್ತಿಯನ್ನು ಪಡೆಯುವ ಇರಾದೆಯಿಂದ ಸುಳ್ಳು ದಾವೆಯನ್ನು ನನ್ನ ತಾಯಿಯ ಮುಖಾಂತರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮನೆ ನಂ.15ಃ1 ನ್ನು ಕಟ್ಟಿಸಲು ಪ್ರತಿವಾದಿ ನಂ.1 ರವರೂ ಕೂಡ ಹಣ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಮತ್ತು ಆತನು ಸೇರಿ ನೀಡಿರುತ್ತೇವೆ ಎಂದು ಹೇಳುತ್ತಾರೆ. ಸರ್ವೆ ನಂ.65 ರಲ್ಲಿ ನನ್ನ ತಾಯಿಗೆ ಪಾಲು ಬರುವಂತೆ ಮಾಡಿ ನಂತರ ಅದನ್ನು ನಾನು ಪಡೆಯುವ ಉದ್ದೇಶದಿಂದ ನನ್ನ ತಾಯಿಯ ಮುಖಾಂತರ ಸುಳ್ಳು ದಾವೆ ಸಲ್ಲಿಸಲು ವ್ಯವಸ್ಥೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಸೊಲಾಪೂರದಲ್ಲಿ ನನ್ನ ಹಾಗೂ ನನ್ನ ಹೆಂಡತಿಯ ಹೆಸರಿನಲ್ಲಿರುವ ಆಸ್ತಿಗಳನ್ನು ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. ದಾವಾ ಆಸ್ತಿಗಳು ಯಾವ ವರ್ಷದಂದು ಪಾಲು ವಾಟ್ನಿಯಾಗಿರುತ್ತವೆ ಎಂಬುವದು ನನ್ನ ಲಿಖಿತ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ವಾದಿಯ ಮುಖಾಂತರ ದಾವೆಯನ್ನು ಸಲ್ಲಿಸಿ ಅದರಲ್ಲಿ ನೀವು ಹಾಜರಾಗಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

ಪಾಟಿ ಸವಾಲುಃ ಪ್ರತಿವಾದಿ ನಂ.4 ರಿಂದ 6 ಶ್ರೀ ಎಸ್‌ಟಿಆರ್ ವಕೀಲರು

ಪ್ರತಿವಾದಿ ನಂ.4 ರಿಂದ 6 ರವರ ಪರ ವಕೀಲರು ಗೈರುಹಾಜರಿರುತ್ತಾರೆ. ಸದರಿ ಪ್ರತಿವಾದಿಯರ ಪರ ಪಾಟಿ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಅಫಜಲಪೂರ